**ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಭದ್ರಾವತಿ**

ಸಿ.ಸಿ.ನಂ. 3618/2022

ಫಿರ್ಯಾದಿಃ ಹಳೇನಗರ ಪೋಲೀಸ್ ಠಾಣೆ

ಭದ್ರಾವತಿ ತಾಲ್ಲೂಕು.

ವಿರುದ್ಧ

ಆರೋಪಿತರುಃ ರೋಷನ್ ಮತ್ತು ಇನ್ನೊಬ್ಬರು.

**ದೋಷಾರೋಪಣೆ**

**ಶ್ರೀಮತಿ ನಾಸಿರ ಬಾನು.,** ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿಯಾದ ನಾನು ಆರೋಪಿಯಾದಃ

1.ರೋಷನ್ ಯಾನೆ ತನ್ನು
ಬಿನ್ ಶೇಖ್ ಮುಜೀಬರ್ ರೆಹಮಾನ್,
ವಯಸ್ಸು 21 ವರ್ಷ,ವಾಸಃ ಕೂಲಿ ಬ್ಲಾಕ್ ಶೆಡ್,
3 ನೇ ತಿರುವು, ನ್ಯೂಟೌನ್, ಭದ್ರಾವತಿ.

2.ಮಹ್ಮದ್ ಖಲೀಲ್ ಯಾನೆ ಫರ್ಹನ್
ವಯಸ್ಸು 25 ವರ್ಷ,ವಾಸಃಕೂಲಿ ಬ್ಲಾಕ್ ಶೆಡ್,
2 ನೇ ತಿರುವು, ನ್ಯೂಟೌನ್, ಭದ್ರಾವತಿ.

3.ಮಧು ಬಿನ್ ಶಿಖಾಮಣಿ,
ವಯಸ್ಸು 25 ವರ್ಷ,ವಾಸಃ ಕೂಲಿ ಬ್ಲಾಕ್ ಶೆಡ್,
2 ನೇ ತಿರುವು, ಮಾರಿಯಮ್ಮ ದೇವಸ್ಥಾನದ ಹತ್ತಿರ,
ನ್ಯೂಟೌನ್, ಭದ್ರಾವತಿ.

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆಃ

ದಿನಾಂಕಃ 03.11.2020 ರಂದು ಸಂಜೆ 06.20 ಗಂಟೆ ಸಮಯದಲ್ಲಿ ಭದ್ರಾವತಿ ಹಳೇನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಿದ್ದಾರೂಢನಗರ, ಸಿಲ್ವರ್ ಪಾರ್ಕ್ ಲೇ ಔಟ್ ನ ಸಿಲ್ವರ್ ಪಾರ್ಕ್ ಮುಂದಿನ ರಸ್ತೆಯಲ್ಲಿರುವ ಕಾರ್ನರ್ ಕಟ್ಟೆಯ ಮೇಲೆ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಸೋಹನ್ ಕುಮಾರ್ ರವರು 1 ಮತ್ತು 2 ನೇ ಆರೋಪಿಯಾದ ನಿಮ್ಮೊಂದಿಗೆ ಸೇರಿಕೊಂಡು 3 ನೇ ಆರೋಪಿಯಾದ ನಿಮ್ಮಿಂದ ಗಾಂಜಾವನ್ನು ತಂದು ಸಾರ್ವಜನಿಕರಿಗೆ ಮಾರಾಟ ಮಾಡಿ ಹಣ

ಸಂಪಾದಿಸುವ ಉದ್ದೇಶದಿಂದ ಗಾಂಜಾ ಮಾರಾಟ ಮಾಡುತ್ತಿದ್ದು ನಿಮ್ಮನ್ನು ವಶಕ್ಕೆ ಪಡೆದು ಅಕ್ರಮವಾಗಿ ಇಟ್ಟು ಕೊಂಡಿದ್ದ 250 ಗಾಂ ಜಾಂಜವನ್ನು ಹಾಗೂ ಗಾಂಜಾ ಮಾರಾಟದಿಂದ ಬಂದ ಕಾನೂನು ಸಂಘರ್ಷಕ್ಕೊಳಗಾದ ಬಾಲಕನ ಪ್ಯಾಂಟ್ ಜೇಬಿನಲ್ಲಿ ಇದ್ದ ಸುಮಾರು ರೂ.350/- ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿದ್ದು ಆ ಮೂಲಕ ನಿಮ್ಮ ವಿರುದ್ಧ ಎನ್ ಡಿ ಪಿ ಎಸ್ ಕಾಯ್ದೆ ಕಲಂ 20(ಬಿ) (ii) (A) ರಡಿಯಲ್ಲಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 25.11.2024

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಭದ್ರಾವತಿ.